ಪುಡಿಕೆಯನ್ನು ನೋಡಿ ಚಾಚಾನೂ ನಗುತ್ತಾ 'ಹಾಂ ಯಾವಾಗಿನಂತೆ ಕಮೀಝಿನ ಕಂಕುಳಲ್ಲಿ ಎರಡಿಂಚು ಸಡ್ಲ ಮಾಡೋದು ಹೌದಾ? ಸರಿ ಇಟ್ಟು ಹೋಗು. ಚಹಾ ಕುಡೀತಿಯಾ?' ಅಂತ ಬಸಿಯೆತ್ತಿ ಕೇಳಿದಾಗ, 'ಅನ್ವರನ ಮುಂದೆ ಬಸಿಯಲ್ಲಿ ಚಹಾ ಹಾಕಿಕೊಂಡು ಸರ್‍ರೆಂದು ಕುಡಿಯೋದೆ? ಛೇ';

ಇವಳು ಜೋರಾಗಿ ಅಡ್ಡಡ್ಡ ತಲೆಯಾಡಿಸಿದ್ದಳು.

'ಒಂದೇ ಕಸುಬಿನ ಮಂದಿ ಒಟ್ಟಿಗೇ ಜಾಗ ಕೊಂಡು ಅಂಗಡಿಗಳನ್ನು ಕಟ್ಟಿಕೋತಾರೋ ಇಲ್ಲಾ ಒಬ್ಬ ಸರಾಫ ಅಂಗಡಿ ಕಟ್ಟಿದ ಅಂತ ಮತ್ತೊಬ್ಬ ಅವನ ಪಕ್ಕವೇ ಕಟ್ತಾನೇನೋ. ಹೀಗೆಯೇ ಬೆಳೆದು ಸರಾಫರ ಓಣಿ, ಬಣಗಾರ ಓಣಿ, ಬಡಗಿಗಳ ಓಣಿಗಳಾಗ್ತಾವೋ ಗೊತ್ತಿಲ್ಲ ಅಂತೂ ಧಾರವಾಡದ ತುಂಬೆಲ್ಲ ಕಸುಬಿನ ಓಣಿಗಳೇ' ಅಂತ ಚಿತ್ರಾ ಮೇಡಂ ಹೇಳಿದ್ದು ಅವಳಿಗೆ ಯಾಕೋ ಥಟ್ಟನೆ ನೆನಪಾಯ್ತು. ಪ್ರಾಜಕ್ತಾ, ಚಿತ್ರಾ ಮೇಡಂಳ ಬಳಿ ಕೆಲಸ ಮಾಡ್ತಾಳೆ. ಕೆಲಸ ಅಂದರೆ ಕಸಮುಸುರೆಯ ಕೆಲಸವಲ್ಲ ಮತ್ತೆ, ಅವಳ ಕೆಲಸಕ್ಕೊಂದು ಚಂದದ ಇಂಗ್ಲಿಷ್ ಹೆಸರಿದೆ -ಆರ್ಟ್ ಅಸಿಸ್ಟೆಂಟ್. ಧಾರವಾಡದ ಪಕ್ಕದ ಸತ್ತೂರಿನಲ್ಲಿ ಚಿತ್ರಾಳೇ ಕಟ್ಟಿ ಬೆಳೆಸಿದ, 'ಮಣ್ಣು – ಮಡಕೆ' ಅಂತ ಪುಟ್ಟ ಫ್ಯಾಕ್ಟರಿಯಿದೆ; ಫ್ಯಾಕ್ಟರಿಯೋ, ಭಟ್ಟಿಯೋ ಏನಾದ್ರೂ ಕರೀರಿ. ಒಟ್ಟಿನಲ್ಲಿ ಅಲ್ಲಿ ಸುಟ್ಟ ಕೆಂಪು ಗಡಿಗೆಗಳು, ಹೂಕುಂಡಗಳು ತಯ್ಯಾರಾಗೋದು ನಿಜ.

ಚಿತ್ರಾಳ ತಂದೆಯ ಮನೆ ಕುಂಬಾರ ಓಣಿಯಲ್ಲಿತ್ತಂತೆ. ಅವನ ಅಡ್ಡ ಹೆಸರು ಕುಂಬಾರ ಅಂತಾನೇ, ಆದರೆ ಅವಳಪ್ಪ ಯಾವುದೋ ಪ್ರೈವೆಟ್ ಕಚೇರಿಯಲ್ಲಿ ಪೀವನ್ ಆಗಿ ಕೆಲಸ ಮಾಡುತ್ತಿದ್ದ. ತಂಬಾಕಿನ ನಶೆಯಿಂದಾಗಿ ನಾಲಿಗೆಯ ಕ್ಯಾನ್ಸರ್ ತಗುಲಿ ಅವ ಬೇಗನೆ ತೀರಿಹೋಗಿದ್ದ. ಇವಳು ದೊರೆತ ಚೂರು ಪಾರು ಸ್ಕಾಲರ್‌ಶಿಪ್ಪಿನಲ್ಲಿ ಒಂದು 'ಬಿ.ಎ ಇನ್ ಇಕನಾಮಿಕ್ಸ್' ಡಿಗ್ರಿ ತಗೊಂಡಳಷ್ಟೆ, ಆದರೆ ನೌಕರಿ ಮಾಡುವ ಉದ್ದೇಶ ಇರಲಿಲ್ಲ. ಕಾಲೇಜು ಮುಗಿದು ಡಿಗ್ರಿ ಸರ್ಟಿಫಿಕೇಟೂ ಕೈಯಲ್ಲಿ ಬಂದ ಮೇಲೆ 'ಇನ್ನೇನು ಮಾಡೋದಪ್ಪ ಮುಂದೆ?' ಅಂತ ಯೋಚಿಸುತ್ತಿರುವಾಗಲೇ ಗೆಳತಿ ಆಶಾಳ ಮದುವೆ ನಿಶ್ಚಯವಾಗಿತ್ತು. ಯೂ ಟ್ಯೂಬ್‌ನಲ್ಲಿ ಬಂದ ವಿಧಾನವನ್ನು ನೋಡಿ ಕಲಿತು ಅವಳ ಲಗ್ನದ ಗೌರಿಪೂಜೆಗೆ ಲಗೋರಿಯಂತೆ ಪೇರಿಸಿಡುವ ಏಳು ಚಿತ್ತಾರದ ಗಡಿಗೆಗಳನ್ನು ತಾನೇ ತಯಾರಿಸಿ ಉಡುಗೊರೆ ಕೊಟ್ಟದ್ದರಿಂದ ಶುರುವಾದ ಅವಳ ಹವ್ಯಾಸ ಈಗ ಫುಲ್ ಟೈಮ್ ಜಾಬ್! ಅಲ್ಲಲ್ಲ ಒಂಥರಾ ಸ್ಟಾರ್ಟ್ ಅಪ್. ಯಾವ ಪೇಪರಿನಲ್ಲೂ ಪಾಂಪ್ಲೆಟ್ ಇಡಲಿಲ್ಲ, ಮನೆಯ ಮುಂದೆ ಬೋರ್ಡ್ ತೂಗುಹಾಕಲಿಲ್ಲ, ಬರೀ ಬಾಯಿಯಿಂದ ಬಾಯಿಗೆ ದೊರೆತ ಪ್ರಚಾರ; ಅಮ್ಮನ ಒಂದೆರಡು ಒಡವೆ ಮಾರಿದ್ದೇ ಬಂಡವಾಳ. ಈಗ ನೀವು ಕ್ರೋಮ್‌ಗೆ ಹೋಗಿ, 'ಪಾಟ್ಸ್ ಎಟ್ ಸತ್ತೂರು, ಧಾರವಾಡ' ಅಂತ ಟೈಪಿಸಿದರೆ ಚಿತ್ರಾಳ ಎಸಬೆಸ್ಟಾಸ್ ಶೀಟಿನ ಕಾರಖಾನೆಯ ಬಣ್ಣದ ಚಿತ್ರಗಳು ತೆರಕೊಳ್ಳುತ್ತವೆ. ನಾಲ್ಕೈದು ಚಂದದ ಹೂಕುಂಡಗಳ ಚಿತ್ರಗಳೂ ಇವೆ. ಎಲ್ಲದರ ಮೇಲೂ 'ಕ್ರಿಯೇಶನ್ಸ್ ಬೈ ಚಿತ್ರಾ ಕುಮಾರ್' ಅಂತ ಹೆಸರನ್ನು ನೀವು ನೋಡಬಹುದು. 'ಕುಂಬಾರ್ ಅಂತ ಬರಕೊಂಡರೂನೂ ಜನ ಹೇಳೋದು ಕುಮಾರ್ ಅಂತಾನೇ. ಅದಕ್ಕೇ ನಾನೇ ಹಾಗೆ ಬದಲಾಯಿಸಿಕೊಂಡುಬಿಟ್ಟೆ' ಅಂತ ಯಾರಾದ್ರೂ ಕೇಳ್ಲೋ ಮುಂಚೇನೇ ತನ್ನ ಹೆಸರಿನ ಗಾಥೆ ಹೇಳಿ ಬಿಡ್ತಾಳಾದ್ರೂ ಅವಳಿಗೆ ತನ್ನ ಕಸುಬಿನ ಬಗ್ಗೆ ಅಪಾರ ಹೆಮ್ಮೆಯಿದೆ. ಮೂವತ್ತೈದಾರೂ ಮದುವೆಯಾಗಿಲ್ಲ; ಯಾರಾದ್ರೂ ಕೇಳಿದ್ರೆ 'ಟೈಮ್ ಸಿಗಲೇ ಇಲ್ಲ' ಅಂತ ನಕ್ಕುಬಿಡ್ತಾಳೆ.

'ತಂದೆಯನ್ನು ಬೇಗ ಕಳಕೊಂಡವಳಿಗೆ ಏನೋ ಒಂಥರಾ ಕೆಚ್ಚು, ಬದುಕಲ್ಲಿ ಗಂಡಸಿನ ಆಧಾರ ಬೇಕೇ ಆಗಿಲ್ಲ ಅಂತ ಪ್ರೂವ್ ಮಾಡ್ಲಿಕ್ಕೇನೇ ಲಗ್ನ ಆಗಿಲ್ಲ ಅವಳು' ಅಂತ ಅವಳನ್ನು ಕಂಡರಿತವರು ಹೇಳೋದಿದೆ. ಏನೇ ಆಗಲಿ ಅವಳ ಈ ರೂಕ್ಷತನ ಅವಳ ಕಲೆಯಲ್ಲಿ ಮಾತ್ರ ಕಾಣೋದಿಲ್ಲ, ಅವಳು ಮಾಡೋ ಹೂಕುಂಡಗಳಿಗೆ ಒಳ್ಳೆಯ ಸುಂದರ ಬಳಕು; ಜೀವಂತಿಕೆ. ಅವಳು ಸಾಂಪ್ರದಾಯಿಕ ಆಕಾರಗಳಿಗೇನೇ ಜೋತು ಬೀಳದೆ ಬಾತುಕೋಳಿ, ಹಡಗು, ಸೂರ್ಯಪಾನದ ಹೂವಿನ ಆಕಾರ- ಹೀಗೆ ಬೇರೆ ಬೇರೆ ತರಹದ ಅಚ್ಚುಗಳಲ್ಲಿ ಹೂಕುಂಡಗಳನ್ನೂ ಮಾಡ್ತಾಳೆ, ಅವುಗಳನ್ನು ವರ್ಕ್‌ಶಾಪ್‌ನ ಮುಂದೆ ಸಾಲಾಗಿ ಜೋಡಿಸಿಟ್ಟರೆ ಕಾರಿನ ಜನವೇ ಇರಲಿ ಸ್ಕೂಟರಿನವರೇ ಇರಲಿ ಒಂದು ಗಳಿಗೆ ನಿಂತು ನೋಡದೆ ಮುಂದೆ ಹೋಗುವುದಿಲ್ಲ. 'ನನ್ನ ಹೊಸ ಮನೆಯನ್ನು ಚಂದ ಮಾಡಲು ಏನು ತರಲಿ? ಏನು ಬಿಡಲಿ?' ಎಂಬಂತಾಡುವ ಎಕ್ಸಟೆನ್ಶನ್